# ಶಿವಶರಣೆಯರ ವಚನಗಳಲ್ಲಿ ಪ್ರಾಣಿ ಪ್ರತಿಮೆ

**ಡಾ. ಜ್ಯೋತಿ ಶಂಕರ್**
ಮಾರ್ಗದರ್ಶಕರು

**ಮಮತ ಬಿ. ಆರ್**
ಸಂಶೋಧನಾ ವಿದ್ಯಾರ್ಥಿ, ಕ. ರಾ. ಮು. ವಿ. ಮೈಸೂರು

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ಜಯೋತಿ ಶಂಕರಮಮತ ಬಿ ಆರ್. "ಶಿವಶರಣೆಯರ ವಚನಗಳಲತಲಿ ಪರಾಣಿ ಪರತಿಮೆ." *Shanlax International Journal of Arts, Science and Humanities*, vol. 12, no. S1, 2024, pp. 219–23

DOI:
https://doi.org/10.34293/sijash.v12iS1-Oct.8308

**ಪೀಠಿಕೆ**

ಜಗತ್ತಿನ ಸಾಂಸ್ಕೃತಿಕ ಇತಿಹಾಸವನ್ನು ಗಮನಿಸಿದರೆ ನಮ್ಮ ಕನ್ನಡ ನಾಡಿನ ಶರಣಸಂಸ್ಕೃತಿಯು ಮಹತ್ತರವಾದುದು. 12ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಶರಣ ಸಂಸ್ಕೃತಿ ಹಾಗೂ ವಚನ ಸಾಹಿತ್ಯವು ಅಂದಿನ ಸಮಾಜದಲ್ಲಿ ನೆಲೆಯೂರಿದ್ದ ಅನೇಕ ಮೂಢನಂಬಿಕೆಗಳು, ಅಂಧಶ್ರದ್ಧೆಗಳು, ಅಂಧ ಆಚರಣೆಗಳು, ಅನಿಷ್ಟ ಪದ್ಧತಿಗಳ ವಿರುದ್ಧ ಧ್ವನಿ ಎತ್ತಲು ಸಹಾಯಕವಾಗಿದ್ದವು. ಬಸವಣ್ಣನವರಿಂದ ಸ್ಥಾಪಿತವಾದ ಅನುಭವ ಮಂಟಪದಲ್ಲಿ ಎಲ್ಲಾ ಶರಣರು ತನ್ನ ಅನುಭವ, ಚಿಂತನೆಗಳನ್ನು ಹಂಚಿಕೊಳ್ಳುತ್ತಿದ್ದರು. ಇದಕ್ಕಾಗಿ ಅವರು ಬಳಸಿಕೊಂಡ ಮಾಧ್ಯಮವೇ ವಚನಗಳು. ಶಿವಶರಣರು ಸಮಾಜದಲ್ಲಿ ಕಂಡ ಅನೇಕ ವಿಷಯಗಳನ್ನು ತಮ್ಮ ಮನದ ಅಂತರಾಳದಲ್ಲಿ ತುಡಿಯುತ್ತಿರುವ ಭಾವನೆಗಳನ್ನು ಸಮರ್ಪಕವಾಗಿ ವ್ಯಕ್ತಪಡಿಸಲು ಅನೇಕ ಪ್ರತಿಮೆಗಳನ್ನು ಬಳಸಿಕೊಂಡರು. ಅವುಗಳಲ್ಲಿ ಪ್ರಾಣಿ ಪ್ರತಿಮೆ ಕೂಡ ಒಂದಾಗಿದೆ. ಪ್ರಾಚೀನ ಕಾವ್ಯಗಳಲ್ಲೂ ಕೂಡ ಈ ಪ್ರಾಣಿ ಪ್ರತಿಮೆಗಳನ್ನು ಬಳಸಿಕೊಂಡು ಅನೇಕ ಕೃತಿಗಳು ಹೊರಬಂದಿವೆ. ಅವುಗಳಲ್ಲಿ ವಡ್ಡಾರಾಧನೆ, ಪಂಚತಂತ್ರ, ಕರ್ಣಾಟಕ ಕಾದಂಬರಿ, ಇತ್ಯಾದಿ ಕೃತಿಗಳನ್ನು ಕಾಣಬಹುದಾಗಿದೆ. ಇದೇ ರೀತಿ ವಚನ ಸಾಹಿತ್ಯದಲ್ಲಿ ಶಿವಶರಣೆಯರು ಕೂಡ ತಮ್ಮ ವಚನಗಳಿಗೆ ವಿವಿಧ ಪ್ರಾಣಿಗಳನ್ನು ಪ್ರತಿಮೆಗಳನ್ನಾಗಿ ಬಳಸಿ ತಮ್ಮ ವಚನಗಳ ಸೌಂದರ್ಯವನ್ನು ಹೆಚ್ಚಿಸಿಕೊಂಡಿದ್ದಾರೆ. ಪ್ರಾಣಿಪ್ರತಿಮೆಗಳನ್ನು ಬಳಸಿಕೊಳ್ಳುವಿಕೆಯ ಮೂಲಕ ತಮ್ಮ ವಚನಗಳಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಸುಲಭವಾಗಿ ಜನಸಾಮಾನ್ಯರಿಗೆ ಅರ್ಥೈಸಲು ಪ್ರಯತ್ನಿಸಿದ್ದಾರೆ. ಶಿವಶರಣೆಯರು ಪ್ರತಿಮೆಗಳನ್ನು ಉಪಮೆ, ರೂಪಕ, ಸಂಕೇತಗಳನ್ನಾಗಿ ಬಳಸಿ ತಮ್ಮ ವಚನಗಳ ಅರ್ಥಕ್ಕೆ ಒಂದು ನೆಲೆಗಟ್ಟನ್ನು ಕಟ್ಟಿ ಕೊಟ್ಟಿದ್ದಾರೆ. ಅಕ್ಕಮಹಾದೇವಿ, ಅಕ್ಕಮ್ಮ, ಅಮುಗೆ ರಾಯಮ್ಮ, ಹಡಪದ ಲಿಂಗಮ್ಮ, ನೀಲಮ್ಮ ಮುಂತಾದವರು ವಿವಿಧ ಪ್ರಾಣಿಗಳನ್ನು ತಮ್ಮ ವಚನಗಳ ಪ್ರತಿಮೆಗಳನ್ನಾಗಿ ಬಳಸಿದ್ದಾರೆ. ಈ ಪ್ರತಿಮೆಗಳು ಪ್ರಾಚೀನ ಕಾವ್ಯಗಳ ಸೌಂದರ್ಯವನ್ನು ಹೆಚ್ಚಿಸುವಂತೆ ವಚನಗಳನ್ನು ಕೂಡ ಸುಂದರವಾಗಿ ಅರ್ಥಪೂರ್ಣಗೊಳಿಸಲು ಸಹಕಾರಿಯಾಗಿವೆ.

**ಅಕ್ಕಮಹಾದೇವಿ**

ಕನ್ನಡದ ಪ್ರಪ್ರಥಮ ವಚನಕಾರ್ತಿ ಎಂಬ ಹೆಗ್ಗಳಿಕೆಯನ್ನು ಪಡೆದ ಅಕ್ಕಮಹಾದೇವಿ ತನ್ನ ವಚನಗಳಲ್ಲಿ ಕಾಣಸಿಗುವ ಅದ್ವಿತೀಯ ಅಂಶಗಳ ಕಾರಣದಿಂದ ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಚೆನ್ನಬಸವಣ್ಣನವರ ಸಾಲಿನಲ್ಲಿ ನಿಲ್ಲುವಾಕೆಯಾಗಿದ್ದಾಳೆ. ತನ್ನ ಅನೇಕ ವಚನಗಳಲ್ಲಿ ವಿವಿಧ ಪ್ರಾಣಿಗಳನ್ನು ಪ್ರತಿಮೆಗಳ ರೂಪದಲ್ಲಿ ಬಳಸಿಕೊಂಡಿದ್ದಾಳೆ. ಈಕೆಯ ಪ್ರಾಣಿಪ್ರತಿಮೆಯನ್ನೊಳಗೊಂಡ ವಚನಗಳು ಇಂತಿವೆ:

> ಭೈತ್ಯ ತಪ್ಪಿ ವಾನರಂಗಳಿಗೆ ಬಂದಡೆ ..
> ಸಾರಿದಡೆ ಆ ವಾನರಗಳು ಬಲ್ಲವೆ ಮುತ್ತಿನ ರಕ್ಷೆಯ?
> ಕಯ್ಕೊಂಡು ವಾನರಗಳು ಮೆದ್ದು ನೋಡಿ
> ಹಣ್ಣಿಲ್ಲವೆಂದು ಬಿಟ್ಟು ಕಳೆದವು.....
> ಆ ವಾನರನಂತಹ ಮನುಜರೆತ್ತ ಬಲ್ಲರು (ಶಿ ವ ಸಂ. ವ362, ಪು 126)

ಈ ವಚನದಲ್ಲಿ ವಾನರಗಳನ್ನು ಪ್ರತಿಮೆಗಳನ್ನಾಗಿ ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ. ಶರಣರ ಮಹತ್ವವನ್ನು ಅರಿಯದ ಮೂಢರನ್ನು ವಾನರಗಳಿಗೆ ಹೋಲಿಸಲಾಗಿದೆ. ಮುತ್ತು ಮಾಣಿಕ್ಯ, ನವರತ್ನಗಳ ಪೆಟ್ಟಿಗೆಯನ್ನು ಒಳಗೊಂಡ ದೋಣಿಗಳು

ದಾರಿತಪ್ಪಿ ವಾನರಗಳಿದ್ದ ಕಡೆಗೆ ಬಂದಾಗ ಆ ವಾನರಗಳು ಪೆಟ್ಟಿಗೆಯಲ್ಲಿನ ಮುತ್ತು ಹಾಗೂ ನವರತ್ನಗಳನ್ನು ತಿನ್ನಲು ಪ್ರಯತ್ನಿಸಿ ಅವು ಹಣ್ಣಲ್ಲವೆಂದು ತಿಳಿದಾಗ ಬಿಟ್ಟು ಹೋಗುವವು. ಇಲ್ಲಿ ವಾನರಗಳು ಪಂಚೇಂದ್ರಿಯಗಳಿಂದ ದೊರೆಯುವ ಐಹಿಕ ಸುಖವನ್ನು ಮೆಚ್ಚಿಕೊಂಡವರನ್ನು ಸೂಚಿಸುವ ಪ್ರತಿಮೆಗಳಾಗಿವೆ. ಈ ವಾನರಗಳಂತಹ ಜನರಿಗೆ ಮುತ್ತು ರತ್ನಗಳಂತಹ ಶರಣರ ನಡೆ ನುಡಿ ಚಾರಿತ್ರದ ಬಗ್ಗೆ ಅರಿವು ಇರುವುದಿಲ್ಲ. ಶರಣರ ಮಹತ್ವವನ್ನು ಶರಣರು ಬಲ್ಲರೇ ಹೊರತು ವಾನರದಂತಹ ಮನುಜರು ಬಲ್ಲರೆ? ಎಂದು ಪ್ರಶ್ನಿಸುವ ಮೂಲಕ ಶರಣರ ಮಹತ್ವವನ್ನು ಎತ್ತಿ ಹಿಡಿಯಲು ವಾನರವನ್ನು ಪ್ರತಿಮೆ ರೂಪದಲ್ಲಿ ಬಳಸಲಾಗಿದೆ. ಈಕೆಯ ಮತ್ತೊಂದು ವಚನವನ್ನು ಗಮನಿಸುವುದಾದರೆ–

ಮದಕರಿಯೂ ಹಂದಿಯೂ
ಒಂದೇ ದಾರಿಯಲ್ಲಿ ಸಂಧಿಸಿದಡೆ
ಹಂದಿಗಂಜಿ ಮದಕರಿ ಕೆಲಕ್ಕೆ ಸಾರಿದಡೆ
ಆ ಹಂದಿಯದು ಕೇಸರಿಯಪ್ಪುದೆ ಚನ್ನಮಲ್ಲಿಕಾರ್ಜುನಾ? (ಶಿ.ವ.ಸಂ. ವ 401, ಪು 143)

ಅಕ್ಕನ ಈ ವಚನದಲ್ಲಿ ಹಂದಿ, ಆನೆ, ಸಿಂಹಗಳನ್ನು ಪ್ರತಿಮೆಗಳ ರೂಪದಲ್ಲಿ ಬಳಸಲಾಗಿದೆ. ಹಂದಿಯನ್ನು ಅರಿವು–ಆಚಾರಗಳನ್ನರಿಯದ ಗಾವಿಲರಿಗೂ, ಮದಕರಿ(ಆನೆ)ಯನ್ನು ಭಕ್ತ ಹಾಗೂ ಶರಣರನ್ನು ಪ್ರತಿಬಿಂಬಿಸುವ ಪ್ರತಿಮೆಗಳಾಗಿ ಬಳಸಲಾಗಿದೆ. ಹಂದಿಯೂ ಆನೆಯೂ ಒಂದೇ ದಾರಿಯಲ್ಲಿ ಸಾಗಿ ಒಂದನೊಂದು ಸಂಧಿಸಿದಾಗ ಆನೆಯು ಹಂದಿಯನ್ನು ನೋಡಿ ಹೆದರಿ ಪಕ್ಕಕ್ಕೆ ಸರಿಯುವುದು. ಇಲ್ಲಿ ಆನೆಯೇ ಹಂದಿಗೆ ಹೆದರುತ್ತದೆ ಎಂದರೆ ಹಂದಿಯ ಮೇಲಿನ ಭಯದಿಂದಲ್ಲ. ಹಂದಿಯು ದುರ್ಗುಣಗಳೆಂಬ ಕೊಳಕನ್ನು ತುಂಬಿಕೊಂಡು ಅರಿಷಡ್ವರ್ಗಗಳೆಂಬ ಕೆಸರಲ್ಲಿ ಬಿದ್ದು ಒದ್ದಾಡುವ ಪ್ರಾಣಿ ಎನ್ನುವಂತೆ ಇಲ್ಲಿ ಸೂಚಿಸಲಾಗಿದೆ. ಈ ಪ್ರತಿಮೆಯು ಅರಿಷಡ್ವರ್ಗಗಳೆಂಬ ವ್ಯಾಮೋಹದಲ್ಲಿ ಹಾಗೂ ಶಬ್ಧ, ಸ್ಪರ್ಷ, ರೂಪ, ರಸ, ಗಂಧಗಳೆಂಬ ಪಂಚ ವಿಷಯಗಳಿಂದ ಕೂಡಿದ ಸಂಸಾರದಲ್ಲಿ ಹೊರಳಾಡುತ್ತಿರುವ ವ್ಯಕ್ತಿಗಳನ್ನು ಸೂಚಿಸುತ್ತದೆ. ಇಂತಹ ವ್ಯಕ್ತಿಗಳು ಭಕ್ತರನ್ನು ಸಹ ತಮ್ಮ ಪ್ರಭಾವದಿಂದ ಅವರ ಮನಸ್ಸನ್ನು ಬದಲಾಯಿಸಲು ವೃಥಾ ಪ್ರಯತ್ನಿಸುವವರೆಂಬ ಹೆದರಿಕೆಯಿಂದ ದುಷ್ಟರನ್ನು ಕಂಡರೆ ದೂರವಿರು ಎಂಬ ಗಾದೆ ಮಾತಿನಂತೆ ಆನೆಯು ಹಂದಿಯನ್ನು ಕಂಡು ತಾನೇ ದೂರ ಸರಿಯುತ್ತದೆ. ಭಕ್ತರು ಇಂತಹ ದುರ್ಜನರನ್ನು ಕಂಡರೆ ದೂರ ಸರಿಯಬೇಕು ಎಂಬ ಅರ್ಥದಲ್ಲಿ ಆನೆಗೆ ಸ್ಪಷ್ಟವಾಗಿ ತಿಳಿದಿದೆ ಅದು ಹಂದಿಯೇ ವಿನಃ ಸಿಂಹವಲ್ಲ ಎಂದು ಅಕ್ಕಮಹಾದೇವಿ ಶರಣತ್ವವನ್ನು ಅರಿಯದ ಗಾವಿಲರನ್ನು ಮೂದಲಿಸಿದ್ದಾಳೆ. ಮತ್ತೊಂದು ವಚನವನ್ನು ನೋಡುವುದಾದರೆ,

ವೃಷಭನ ಹಿಂದೆ ಪಶುವಾನು ಬಂದೆನು;
ನಂಬಿ ನಚ್ಚಿ ಪಶುವಾನುಬಂದೆನು.
ಸಾಕಿ ಸಲಹಿಹನೆಂದು ಸಲೆ ನಚ್ಚಿ ಬಂದನು.
ಒಲಿದಹ ಒಲಿದಹನೆಂದು ಬಳಿಯಲ್ಲಿ ಬಂದೆನು . (ಶಿ.ವ.ಸಂ. ವ367, ಪು 128)

ಅಕ್ಕಮಹಾದೇವಿಯ ಈ ವಚನವು ವೃಷಭ ಮತ್ತು ಪಶು ಪ್ರತಿಮೆಗಳ ಮೂಲಕ ತಾತ್ವಿಕ ದರ್ಶನವನ್ನು ಮೂಡಿಸುತ್ತಿದೆ. ವೃಷಭವನ್ನು ಪಶುಪತಿಯಾದ ಶಿವನನ್ನು ಪ್ರತಿರೂಪಿಸಲು ಬಳಸಲಾಗಿದೆ. ಮಾನವನಲ್ಲಿ ಮೃಗತ್ವ, ಪಶುತ್ವ, ಮನುಷ್ಯತ್ವ, ಮತ್ತು ದೈವತ್ವಗಳೆಂಬ ಗುಣಗಳು ಕಂಡುಬರುತ್ತವೆ. ಶರಣತತ್ವದಲ್ಲಿ ಪಶುಗಳೆಂದರೆ ಈ ಲೋಕದಲ್ಲಿರುವ ಜೀವಾತ್ಮಗಳಾಗಿವೆ. ಜೀವಾತ್ಮದಲ್ಲಿನ ಪಶುತ್ವವನ್ನು ಹೋಗಲಾಡಿಸಿ ಮನುಷ್ಯತ್ವ ಹಾಗೂ ದೈವತ್ವದೆಡೆಗೆ ಸನ್ಮಾರ್ಗದಲ್ಲಿ ಕೊಂಡೊಯ್ಯುವವನು ಚೆನ್ನಮಲ್ಲಿಕಾರ್ಜುನನಾದ ಪಶುಪತಿಯಾಗಿದ್ದಾನೆ. ಹೀಗೆ ಪಶುಪತಿಯಾದ ವೃಷಭನು ತನ್ನಲ್ಲಿನ ಪಶುತ್ವವನ್ನು ಹೋಗಲಾಡಿಸಿ ಸನ್ಮಾರ್ಗದಲ್ಲಿ ನಡೆಸುವವನೆಂಬ ನಂಬಿಕೆಯಿಂದ ಬರುವ ಭಕ್ತರಿದ್ದಾರೆ. ಅದರಲ್ಲಿ ಅಕ್ಕಮಹಾದೇವಿ ಸಹ ಒಬ್ಬಳಾಗಿದ್ದಾಳೆ. ಶರಣತ್ವವನ್ನು ನಂಬಿ ಬರುವ ಪಶುಗಳೆಂಬ ಜೀವಾತ್ಮಗಳನ್ನು ಅರಿಷಡ್ವರ್ಗ ಎಂಬ ಪಾಶವು ಭಕ್ತಿಮಾರ್ಗದೆಡೆಗೆ ಬಾರದಂತೆ ಹಿಂದಕ್ಕೆ ಎಳೆದೊಯ್ಯುತ್ತದೆ. ಪಶುಪತಿಯಾದ ನೀನು ಇಂತಹವುಗಳನ್ನು ಹೇಗೆ ಸಹಿಸಿದೆ ಎಂದು ತನ್ನ ಇಷ್ಟದೈವವಾದ ಚೆನ್ನಮಲ್ಲಿಕಾರ್ಜುನನ್ನು ಪ್ರಶ್ನಿಸುತ್ತ ಮನುಷ್ಯನಲ್ಲಿರುವ ದುರ್ಗುಣಗಳಿಗೆ ಕಡಿವಾಣ ಹಾಕಿ ಭಕ್ತಿ ಮತ್ತು ಸನ್ಮಾರ್ಗದೆಡೆಗೆ ಕೊಂಡೊಯ್ಯುವಂತೆ ವಿನಂತಿಸಿದ್ದಾಳೆ. ಅಕ್ಕನಲ್ಲಿರುವ ಭಕ್ತಿಯ ಪರಾಕಾಷ್ಟತೆಯನ್ನು ಇಲ್ಲಿ ಬಳಸಿರುವ ಪಶು ಹಾಗೂ ವೃಷಭ ಪ್ರತಿಮೆಗಳಿಂದ ತಿಳಿಯಬಹುದು.

**ಅಕ್ಕಮ್ಮ**

'ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿರುವ ಅಕ್ಕಮ್ಮ ಆಚಾರವೇ ಪ್ರಾಣವನ್ನಾಗಿಸಿಕೊಂಡ ವಚನಕಾರ್ತಿಯಾಗಿದ್ದಾಳೆ. ಸಂಖ್ಯಾ ದೃಷ್ಟಿಯಿಂದ ನೋಡಿದರೆ ಅತಿ ಹೆಚ್ಚು ವಚನಗಳನ್ನು ರಚಿಸಿದವರಲ್ಲಿ ಈಕೆಯು ಕೂಡ ಒಬ್ಬಳಾಗಿದ್ದಾಳೆ. ವ್ರತ ನೇಮ ನಿಷ್ಠೆ ಶೀಲಕ್ಕೆ ಪ್ರಧಾನಾದ್ಯತೆಯನ್ನು ನೀಡಿರುವ ಅಕ್ಕಮ್ಮ ತನ್ನ ವಚನಗಳಲ್ಲಿ ಅನೇಕ ಪ್ರಾಣಿ ಪ್ರತಿಮೆಗಳನ್ನು ಬಳಸಿದ್ದಾಳೆ.

ಮೂಷಕ, ವಿಹಂಗ, ಕುಕ್ಕುಟ,
ಮಾರ್ಜಾಲ, ಕುಕ್ಕುರ, ದೌಷ್ಟ
ಇವು ಮೊದಲಾದ ನೇಮಿಗಳೆಲ್ಲರು ಸಿಕ್ಕಿದರಲ್ಲಾ!......(ಶಿ ವ ಸಂ ವ544, ಪು206)

ಮೂಷಕ ಎಂದರೆ ಇಲಿ, ವಿಹಂಗವೆಂದರೆ ಸ್ವಚ್ಛಂದವಾಗಿ ಹಾರಾಡಬಲ್ಲ ಪಕ್ಷಿ, ಕುಕ್ಕುಟವೆಂದರೆ ಕೋಳಿ, ಮಾರ್ಜಾಲವೆಂದರೆ ಬೆಕ್ಕು, ಕುಕ್ಕುರ ಎಂದರೆ ನಾಯಿ, ದೌಷ್ಟ ಎಂದರೆ ಒಂಟೆ. ಈ ಪ್ರಾಣಿ ಪಕ್ಷಿಗಳನ್ನು ಪ್ರತಿಮೆಗಳನ್ನಾಗಿ ಬಳಸುವ ಮೂಲಕ ವ್ರತಭ್ರಷ್ಟರು, ಭವಿಗಳು, ಡಾಂಭಿಕ ಭಕ್ತರನ್ನು ಅಕ್ಕಮ್ಮ ಮೂದಲಿಸಿದ್ದಾಳೆ. ಇಲಿಯು ದೇವರ ಬಳಿ ಇಟ್ಟ ಪ್ರಸಾದವನ್ನೇ ಯಾರಿಗೂ ಕಾಣದ ಹಾಗೆ

ತಿನ್ನುವ ಪ್ರಾಣಿ, ಹಾಗೆಯೇ ವ್ರತಭ್ರಷ್ಟರು ನೇಮಿಗಳಾಗದೇ ತಮ್ಮ ಮನದ ಆಸೆಗಳಿಗೆ ಮಾತ್ರ ನಿಮಿತ್ತವಾಗಿರುತ್ತಾರೆ. ವ್ರತಭ್ರಷ್ಟರು ನೇಮಿಗಳಂತೆ ವೇಷ ಧರಿಸಿದರೂ ವ್ರತಾಚಾರಕ್ಕೆ ಬದ್ಧರಾಗದೇ ಸ್ವಚ್ಛಂದವಾಗಿ ಹಾರಾಡುವಂತಹ ಪಕ್ಷಿಗಳಂತೆ ತಮ್ಮ ಮನಸನ್ನು ನಿಯಂತ್ರಣದಲ್ಲಿಟ್ಟು ಕೊಂಡಿರುವುದಿಲ್ಲ. ಕದ್ದು ಹಾಲು ಕುಡಿಯುವ ಬೆಕ್ಕಿನಂತೆ ಕದ್ದು ಮದ್ಯ ಸೇವಿಸುವ ಮದ್ಯವ್ಯಸನಿಗಳಾಗಿರುತ್ತಾರೆ. ಹಸಿರು ಸಮೃದ್ಧತೆಯನ್ನು ಅರಿಯದ ಸದಾ ಮರುಭೂಮಿಯಲ್ಲಿ ಅಲೆದಾಡುವ ಒಂಟೆಗಳನ್ನು, ಅಜ್ಞಾನದಲ್ಲಿ ತಿರುಗುವವರಿಗೆ ಹೋಲಿಸಲಾಗಿದೆ. ಒಲ್ಲದ ಮನಸ್ಸಿನಲ್ಲಿ ವ್ರತಾಚಾರ ಮಾಡಿದರೆ ಅದು ವ್ರತವಾಗುವುದಿಲ್ಲ. ವ್ರತ ಮನದಲ್ಲಿರಬೇಕು ಎಂಬುದು ಅಕ್ಕಮ್ಮನ ವಾದವಾಗಿದೆ. ಭಕ್ತರಾಗಿ ನೇಮವನ್ನು ಕೈಗೊಂಡು ತಾವು ಹಿಡಿದ ವ್ರತಕ್ಕೆ ಭವಿಯ ಪರಾಪೇಕ್ಷೆಯ ಬಳಿಯಿಂದ ದ್ರವ್ಯವ ತಂದು ಗುರು-ಲಿಂಗ-ಜಂಗಮ ಸೇವೆಯನ್ನು ಮಾಡಿ ಕೊನೆಗೆ ತನ್ನ ಒಡಲ ಆಸೆಗೆ ಒಳಗಾಗಿರುವ ಸುರೆಗುಡುಹಿಗೆ(ಮದ್ಯ ವ್ಯಸನಿ) ಭಕ್ತಿಯೇಕೆ?, ವ್ರತಾಚಾರಿ ಎಂಬ ಪಟ್ಟವೇಕೆ?, ಇಂತಹವರು ವ್ರತಕ್ಕೆ ದೂರ. ಆಚಾರದ ಹೊರಗಿರುವವರು. ಇಂತಹವರು ರಾಮೇಶ್ವರ ಲಿಂಗಕ್ಕೂ ದೂರವಿರುತ್ತಾರೆ ಎಂದು ಅಕ್ಕಮ್ಮ ತನ್ನ ಈ ವಚನದಲ್ಲಿ ತಿಳಿಸಿದ್ದಾಳೆ.

ಮತ್ತೊಂದು ವಚನದಲ್ಲಿ ಅಕ್ಕಮ್ಮ ಕತ್ತೆಯನ್ನು ಪ್ರತಿಮೆಯನ್ನಾಗಿ ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು (ಶಿ ವ ಸಂ ವ 523,ಪು 196)

ಇಲ್ಲಿ ಅಕ್ಕಮ್ಮ ಡಾಂಭಿಕ ಭಕ್ತರನ್ನು ಪ್ರತಿನಿಧಿಸಲು ಕತ್ತೆಯನ್ನು ಪ್ರತಿಮೆಯನ್ನಾಗಿ ಬಳಸಲಾಗಿದೆ. ನಿಜಭಕ್ತಿಯ ಸ್ವರೂಪವನ್ನು ಅರಿಯದ ಕೆಲವು ಡಾಂಭಿಕರು ಕೇವಲ ತೋರ್ಪಡಿಸುವಿಕೆಗಾಗಿ ವ್ರತಾಚಾರವನ್ನು ಕೈಗೊಂಡವರನ್ನು ಅಕ್ಕಮ್ಮ ಕತ್ತೆಗೆ ಹೋಲಿಸಿ ಬುದ್ಧಿಯಿಲ್ಲದ ಜೀವಿಗಳು ಎಂದು ವಿಡಂಬಿಸಿದ್ದಾಳೆ. ದೇವರು ಧರ್ಮದ ಹೆಸರಿನಲ್ಲಿ ಬೆತ್ತಲೆಯಾಗಿ ತಿರುಗುವವರು ಕತ್ತೆಯ ಮಕ್ಕಳು ಎಂದು ಹೇಳಿದ್ದಾಳೆ. ಪ್ರಾಚೀನ ಕಾಲದ ಕೃತಿಗಳಲ್ಲಿಯೂ ಕೂಡ ಕತ್ತೆಯನ್ನು ಬುದ್ಧಿಯಿಲ್ಲದ ಜೀವಿ ಎಂದೇ ಬಿಂಬಿಸಲಾಗಿದೆ. ಹಾಗೆಯೇ ಇಲ್ಲಿಯೂ ಕೂಡ ಅಕ್ಕಮ್ಮ ಬುದ್ಧಿಯಿಲ್ಲದೆ ದೇವರ ಹೆಸರಿನಲ್ಲಿ ತಿರುಗುವವರು ಕತ್ತೆಯ ಮಕ್ಕಳು ಎಂದು ಡಾಂಭಿಕರನ್ನು ನೇರ ನಿಷ್ಠೂರ ಧ್ವನಿಗಳಿಂದ ವಿಡಂಬಿಸಿದ್ದಾಳೆ.

ಈಕೆಯ ಮತ್ತೊಂದು ವಚನವಾದ 'ಹೋತಿನ ಗಡ್ಡದಂತೆ ಗಡ್ಡದ ಹಿರಿಯರು ನೋಡಾ....' (ಶಿ ವ ಸಂ ವ586, ಪು226) ಎಂದು ಹೇಳುವಲ್ಲಿಯೂ ಕೂಡ ಹಿರಿಯರೆಂದು ಗಡ್ಡ ಬಿಟ್ಟು ತಿರುಗುತ್ತ ಅನಾಚಾರದಲ್ಲಿ ಮಗ್ನರಾಗಿರುವ ವ್ರತಭ್ರಷ್ಟರನ್ನು ಪ್ರತಿನಿಧಿಸಲು ಅವರ ಗಡ್ಡವನ್ನು ಹೋತಿನ ಗಡ್ಡಕ್ಕೆ ಹೋಲಿಸಿದ್ದಾಳೆ. ಗಡ್ಡ ಬಿಟ್ಟ ಹೋತವನ್ನು ಹಿರಿಯ, ಜ್ಞಾನಿ ಎಂದು ಹೇಳಲಾಗುವುದಿಲ್ಲ. ಹಾಗೆಯೇ ಗಡ್ಡ ಬಿಟ್ಟವರೆಲ್ಲ ಸಾಧು ಸಂತರಲ್ಲ. ಇವರಲ್ಲಿ ವ್ರತಭ್ರಷ್ಟರು ಇರುತ್ತಾರೆ. ಅಹಂಕಾರದಿಂದಿದ್ದು, ಆಚಾರವನ್ನು ಬಿಟ್ಟು ಅನಾಚಾರದಲ್ಲಿ ಮಗ್ನರಾಗಿರುವವರು ನರಕಕ್ಕೆ ಯೋಗ್ಯವಾದವರು ಎಂದು ವಿಡಂಬಿಸಿದ್ದಾಳೆ. ಮೂಢತ್ವದಿಂದ ವ್ರತವನ್ನು ಮಾಡುವವರೆಲ್ಲ ಕೇವಲ ತೋರಿಕೆಗಾಗಿ ಮಾಡುವವರಾಗಿರುತ್ತಾರೆಯೇ ಹೊರತು ಅವರು ಸದ್ಭಕ್ತರಲ್ಲ ಎಂದು ಹೇಳಿದ್ದಾಳೆ. ಇಲ್ಲಿ ತನ್ನ ಕಾಲದಲ್ಲಿದ್ದ ಕೆಲವು ಅರ್ಥವಿಲ್ಲದ ಆಚರಣೆಗಳನ್ನು ವಿಡಂಬಿಸಿದ್ದಾಳೆ. ಕೇವಲ ಬಹಿರಂಗದ ಆಚರಣೆಗಳು ವ್ರತವಾಗುವುದಿಲ್ಲ, ವ್ರತ ಅಂತರಂಗದಲ್ಲಿರಬೇಕು ಎನ್ನುವುದು ಅಕ್ಕಮ್ಮನ ಆಶಯವಾಗಿದೆ. ಹೀಗೆ ಅಕ್ಕಮ್ಮ ಪ್ರಾಣಿಗಳನ್ನು ವಚನಗಳಲ್ಲಿ ಬಳಸಿ ವ್ರತಾಚಾರದ ಮಹಿಮೆಯನ್ನು ತಿಳಿಸಲೆತ್ನಿಸಿದ್ದಾಳೆ.

**ಅಮುಗೆ ರಾಯಮ್ಮ**

ಅಮುಗೆ ರಾಯಮ್ಮ ಶರಣ ಸಿದ್ಧಾಂತಕ್ಕೆ ನಿಷ್ಠಳಾಗಿದ್ದ ಮತ್ತೊಬ್ಬ ಶಿವಶರಣೆಯಾಗಿದ್ದಾಳೆ. ವೀರಣ್ಣ ರಾಜೂರರವರು ಈಕೆಯನ್ನು ಕುರಿತು "ರಾಯಮ್ಮ ನಿಷ್ಠುರವಾದಿ. ತಾವು ಜ್ಞಾನಿಗಳೆಂದು ತಿರುಗುವ ವೇಷಧಾರಿ ವಿರಕ್ತರನ್ನು ಆಕೆ ವಿಶೇಷವಾಗಿ ಟೀಕಿಸಿದ್ದಾಳೆ. ಈ ಸಂದರ್ಭದಲ್ಲಿ ಆಕೆ ಬಳಸುವ ಮಾತುಗಳು ಚಾಟಿ ಏಟಿನಂತೆ ಚುರುಕು ಮುಟ್ಟಿಸುತ್ತವೆ"1 ಎಂದು ಹೇಳಿದ್ದಾರೆ. ಈಕೆಯ ವಚನವನ್ನು ಗಮನಿಸುವುದಾದರೆ,

ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?
ಆಡಿನಮರಿ ಆನೆಯಾಗಬಲ್ಲುದೆ?
ಸೀಳನಾಯಿ ಸಿಂಹದ ಮರಿಯಾಗಬಲ್ಲುದೆ?........... (ಶಿ ವ ಸಂ ವ626, ಪು241)

ಅಮುಗೆ ರಾಯಮ್ಮ ತನ್ನ ಬಹುತೇಕ ವಚನಗಳಲ್ಲಿ ಅನೇಕ ಪ್ರಾಣಿ ಪ್ರತಿಮೆಗಳನ್ನು ಬಳಸಿರುವುದನ್ನು ಕಾಣಬಹುದಾಗಿದೆ. ಕಾಗೆ–ಕೋಗಿಲೆ, ಆಡಿನಮರಿ–ಆನೆ, ಸೀಳುನಾಯಿ–ಸಿಂಹದಮರಿ ಈ ಪ್ರಾಣಿ ಪಕ್ಷಿಗಳನ್ನು ಪರಸ್ಪರ ಹೋಲಿಸಲು ಈ ಪ್ರತಿಮೆಗಳನ್ನು ಬಳಸಲಾಗಿದೆ. ಕಾಗೆ, ಆಡು ಹಾಗೂ ಸೀಳುನಾಯಿಯನ್ನು ಡಾಂಭಿಕ ಭಕ್ತರನ್ನು ನಿರೂಪಿಸಲು ಬಳಸಲಾಗಿದೆ. ಹಾಗೆಯೇ ಕೋಗಿಲೆ, ಆನೆ ಹಾಗೂ ಸಿಂಹದಮರಿಯನ್ನು ಭಕ್ತರನ್ನು ಬಿಂಬಿಸಲು ಬಳಸಲಾಗಿದೆ. ಕಾಗೆ ಕೋಗಿಲೆಗಳಲ್ಲಿ ಹೋಲಿಕೆ ಕಂಡುಬಂದರೂ ಕೋಗಿಲೆ ಹೊಂದಿರುವ ಮಧುರ ಕಂಠಧ್ವನಿ ಕಾಗೆಗೆ ಇರುವುದಿಲ್ಲ. ಆಡು– ಆನೆಯಲ್ಲಿ ಹಾಗೂ ಸೀಳುನಾಯಿ –ಸಿಂಹಪದದ ಆರಂಭದಲ್ಲಿ ಕ್ರಮವಾಗಿ 'ಆ' ಮತ್ತು 'ಸಿ' ಅಕ್ಷರಗಳು ಕಂಡುಬಂದರೂ ಆಡು ಆನೆಯಾಗುವುದಿಲ್ಲ. ಸೀಳುನಾಯಿ ಸಿಂಹವಾಗುವುದಿಲ್ಲ. ಆಡು ಮತ್ತು ಆನೆ ಸಸ್ಯಹಾರಿಗಳಾದರೂ ಎರಡು ಸಮವಾಗುವುದಿಲ್ಲ. ಹಾಗೆಯೇ ಸೀಳುನಾಯಿ ಬೇಟೆಯಾಡುವುದರಲ್ಲಿ ನಿಪುಣವಾದರೂ ಸಿಂಹವಾಗುವುದಿಲ್ಲ. ಇದೇ ರೀತಿ ಭಕ್ತರು ಮತ್ತು ಡಾಂಭಿಕ ಭಕ್ತರು ತಮ್ಮ ವೇಷಭೂ–ಷಣಗಳಲ್ಲಿ ಸಾಮ್ಯತೆ ಇದ್ದರೂ ಅವರ ಅಂತರಂಗ ಶುದ್ಧಿಯಲ್ಲಿನ ವ್ಯತ್ಯಾಸಗಳಿಂದಾಗಿ ಡಾಂಭಿಕರೆಂದಿಗೂ ನೈಜ ಭಕ್ತರಾಗುವುದಿಲ್ಲ ಎಂಬ ಸಂದೇಶವನ್ನು ಈ ವಚನದಲ್ಲಿ ನೀಡಲಾಗಿದೆ.

ಕುಂಜರನ ಮರಿಯ ಸರಪಳಿಯಲ್ಲಿ ಕಟ್ಟುವರಲ್ಲದೆ (ಶಿ ವ ಸಂ ವ633, ಪು243)

ಈ ವಚನದಲ್ಲಿ ರಾಯಮ್ಮಳು ಅನೇಕ ಪ್ರಾಣಿಗಳನ್ನು ಬಳಸಿಕೊಂಡಿರುವುದನ್ನು ಕಾಣಬಹುದು. ಆನೆಯ ಮರಿ–ಹಂದಿಯ

ಮರಿ, ಸಿಂಹದ ಮರಿ–ಸಿಂಗಳೀಕನ ಮರಿ, ಕಸ್ತೂರಿ ಮೃಗ–ಕತ್ತೆಯಮರಿ, ಈ ಪ್ರಾಣಿಗಳನಡುವೆಪರಸ್ಪರಹೋಲಿಕೆಮಾಡಿ ಜ್ಞಾನಿ–ಅಜ್ಞಾನಿಗಳು, ಭಕ್ತ–ಲಿಂಗವನ್ನರಿಯದವ್ಯಕ್ತಿಗಳನ್ನು ಕುರಿತುಹೇಳಲಾಗಿದೆ. ಆನೆ ಎಂದಾಕ್ಷಣ ಅದುಬೃಹತ್ಪ್ರಾಣಿಯಾಗಿರುವುದರಿಂದ ಅದರಮೇಲಿನಭಯದಿಂದ ಅದನ್ನು ಸರಪಣಿಯಲ್ಲಿ ಕಟ್ಟಿರುತ್ತಾರೆ ಹಂದಿಯನ್ನು ಕಟ್ಟುತ್ತಾರೆಯೇ? ಎಂದು ಪ್ರಶ್ನಿಸುತ್ತಾಳೆ. ಸಿಂಹದ ಮರಿಯನ್ನು ಕಂಡರೆ ಸೋಜಿಗದಲ್ಲಿ ನೋಡುತ್ತಾರೆಯೇ ಹೊರತು ಸಿಂಗಳೀಕದ ಮರಿಯನ್ನು ಯಾರು ನೋಡುತ್ತಾರೆ? ಕಸ್ತೂರಿ ಮೃಗವನ್ನು ಕಂಡಾಗ ಆಶ್ಚರ್ಯವುಂಟಾಗುತ್ತದೆ. ಮತ್ತಷ್ಟು ಹೊತ್ತು ನೋಡಬೇಕೆಂಬ ಅದ್ಭುತವನ್ನುಂಟು ಮಾಡುತ್ತದೆ. ಆದರೆ ಕತ್ತೆಯ ಮರಿಯನ್ನು ಯಾರೂ ನೋಡರು. ಹೀಗೆ ಹಂದಿ, ಸಿಂಗಳೀಕ, ಕತ್ತೆಯನ್ನು ಲಿಂಗದ ಮಹತ್ವವನ್ನರಿಯದ ಅಜ್ಞಾನಿಗಳನ್ನು ಪ್ರತಿನಿಧಿಸಿದರೆ ಆನೆ, ಸಿಂಹ, ಕಸ್ತೂರಿ ಮೃಗವನ್ನು ಭಕ್ತರು ಶರಣರನ್ನು ಪ್ರತಿನಿಧಿಸಲಾಗಿದೆ. ಇವರೀರ್ವರ ನಡುವಿನ ವ್ಯತ್ಯಾಸಗಳನ್ನು ನಿರೂಪಿಸಿರುವುದು ಸೊಗಸಾಗಿ ಮೂಡಿಬಂದಿದೆ.

**ಹಡಪದ ಲಿಂಗಮ್ಮ**

'ನಾನೊಂದು ಹಾಳೂರಿಗೆ ಹೋಗುತ್ತಿರಲು, ಆ ಹಾಳೂರ ಹೊಕ್ಕಡೆ ಅಲ್ಲಿ ನಾಯಿಗಳು ಅಟ್ಟಿಕೊಂಡು ಬಂದವು, ಹುಲಿ ಕರಡಿ ಅಡ್ಡಲಾದವು.ಇವ ಕಂಡು ನಾ ಹೆದರಿಕೊಂಡು ನನ್ನ ಕೈಗೊಂದು ಕಲ್ಲ ತಕ್ಕೊಂಡು ನೋಡುತ್ತಾ ಬರುತ್ತಿರಲು, ಆ ನಾಯಿಗಳು ಓಡಿಹೋದವು. ಹುಲಿ ಕರಡಿಗಳು ಅಲ್ಲಿಯೇ ಬಯಲಾದವು. ಆ ಊರು ನಿರ್ಮಲವಾಯಿತ್ತು ' (.ಶಿ ವ ಸಂ 1311, ಪು 485)

ಹಡಪದ ಲಿಂಗಮ್ಮ ಬೆಡಗಿನ ವಚನಗಳ ರಚನೆಯಲ್ಲಿಯೂ ಸಮರ್ಥಳಾಗಿದ್ದಾಳೆ. ವೀರಣ್ಣ ರಾಜೂರರವರು ಈಕೆಯ ವಚನ ಶೈಲಿಯನ್ನು ಕುರಿತು "ಲಿಂಗಮ್ಮನ ಭಾಷೆ, ತತ್ವನಿರೂಪಣೆಯಲ್ಲಿ ಬೆಡಗಿನಿಂದ ಕೂಡಿದ್ದರೆ, ಟೀಕಿಸುವಲ್ಲಿ ಸರಳ, ದೇಶೀ ಸೊಗಡಿನಿಂದ ಸಂಭ್ರಮಿಸಿದೆ"2 ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಬೆಡಗಿನ ವಚನಗಳಲ್ಲಿ ಪ್ರತಿಮೆಗಳನ್ನು ಹೆಚ್ಚಾಗಿ ಬಳಸಲಾಗಿರುತ್ತವೆ. ಈ ವಚನ ಕೂಡ ಬೆಡಗಿನ ವಚನವಾಗಿದ್ದು, ಇಲ್ಲಿ ನಾಯಿ, ಹುಲಿ, ಕರಡಿ ಪ್ರಾಣಿಗಳನ್ನು ಪ್ರತಿಮೆಗಳನ್ನಾಗಿ ಬಳಸಲಾಗಿದ್ದು ಆಣವ, ಮಾಯಾ, ಕಾರ್ಮಿಕ ಎಂಬ ಮಲತ್ರಯಗಳು ಹಾಗೂ ಮನುಷ್ಯನ ಆರು ವೈರಿಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಸೂಚಿಸಲು ಬಳಸಲಾಗಿದೆ. ಇಲ್ಲಿ ಲಿಂಗಮ್ಮ ಹೋಗುತ್ತಿರುವ ಊರು ಹಾಳೂರಾಗಿದೆ. ಊರು ಎಂಬುದು ಕೂಡ ಪ್ರತಿಮೆಯಾಗಿ ಮೂಡಿಬಂದಿದೆ. ಊರು ಎಂದರೆ ಮಾನವನ ದೇಹವಾಗಿದೆ. ಆ ಊರು ಸುಂದರವಾದ ಊರಲ್ಲ; ಹಾಳೂರು. ಮನದಲ್ಲಿನ ಮಲತ್ರಯಗಳು ಆ ದೇಹವನ್ನು ಹಾಳು ಮಾಡಿವೆ. ಈ ಮಲತ್ರಯಗಳೆಂಬ ನಾಯಿಗಳು ಈಕೆಯನ್ನು (ಮನಸ್ಸನ್ನು) ಅಟ್ಟಿಸಿಕೊಂಡು ಬಂದವು. ಅರಿಷಡ್ವರ್ಗಗಳೆಂಬ ಹುಲಿ ಕರಡಿಗಳು ಅಡ್ಡ ಬಂದವು. ಮನದೊಳಗಿನ ಈ ವೈರಿಗಳಿಂದ ದೇಹವೆಂಬ ಊರು ಹಾಳಾದ ಊರಾಗಿದೆ. ನಾಯಿ ಕರಡಿ ಹುಲಿಗಳೆಂಬ ಮನದ ವೈರಿಗಳಿಗೆ ಕಲ್ಲಿನಿಂದ ಹೊಡೆದಾಗ ಅವು ಓಡಿಹೋಗುತ್ತವೆ. ಅವುಗಳನ್ನು ಓಡಿಸಲೇಬೇಕೆಂಬ ಜಾಗೃತಿಯು ಮನಸ್ಸಿನಲ್ಲಿ ಮೂಡಿದಾಗ ಅರಿವು ಉಂಟಾಗುತ್ತದೆ. ಮಲತ್ರಯಗಳು ನಾಶವಾಗಿ ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳ ಬಗ್ಗೆ ಅರಿವು ಮೂಡುತ್ತದೆ. ಆಗ ಮನದ ವೈರಿಗಳು ಓಡಿಹೋಗುತ್ತವೆ. ನಂತರ ಅದು ನಿರ್ಮಲ ಊರಾಗಿ ಕಾಣುತ್ತದೆ. ಆ ಊರನ್ನಾಳುವ ಅರಸ ಊರಿನೊಡನೆ ಬೆರತು ಒಂದಾಗುತ್ತಾನೆ. ಅರಸ ಎಂಬ ಪ್ರತಿಮೆಯು ಮನಸ್ಸನ್ನು ಸೂಚಿಸುತ್ತದೆ. ದೇಹ ಮತ್ತು ಮನಸ್ಸು ಒಂದಾದಾಗ ಮನದೊಳಗಿನ ದ್ವಂದ್ವಗಳು ಕಳೆದು ಮನುಷ್ಯ ಸುಖಿಯಾಗುತ್ತಾನೆ. ಲಿಂಗಮ್ಮನ ವಚನದಲ್ಲಿನ ಈ ಪ್ರತಿಮೆಗಳು ತತ್ವ ಬೋಧನೆಯಲ್ಲಿ ಸಹಕಾರಿಗಳಾಗಿವೆ.

**ಉಪಸಂಹಾರ**

ಈ ರೀತಿ ಪ್ರಾಣಿಪ್ರಪಂಚದ ಗುಣ ಸ್ವಭಾವಗಳನ್ನು ಅರಿತಿದ್ದ ಶಿವಶರಣೆಯರು ಅವುಗಳ ಮೂಲಕವಾಗಿಯೇ ಮಾನವನ ಸ್ವಭಾವದ ಗುಣಲಕ್ಷಣಗಳನ್ನು ವ್ಯಾಖ್ಯಾನ ಮಾಡಿರುವುದನ್ನು ಕಾಣಬಹುದಾಗಿದೆ. ಶರಣೆಯರ ಪ್ರಾಣಿಪ್ರತಿಮೆಗಳು ಕೆಲವು ಸೌಮ್ಯನುಡಿಗಳಲ್ಲಿದ್ದರೆ, ಮತ್ತೆ ಕೆಲವು ನಿಷ್ಠುರ ನುಡಿಗಳಾಗಿವೆ. ಜನಸಾಮಾನ್ಯರಿಗೆ ಬಹುಬೇಗ ಅರ್ಥವಾಗುವ ಕಾರಣಕ್ಕಾಗಿ ಶರಣರಂತೆ ಶಿವಶರಣೆಯರೂ ಕೂಡ ಪ್ರಾಣಿಪ್ರತಿಮೆಗಳನ್ನು ಬಳಸಿ ಸಫಲರಾಗಿದ್ದಾರೆ. ಶರಣೆಯರು ಮಂಗ, ನಾಯಿ, ಸರ್ಪ, ಹಂದಿ, ಪಶು, ಹುಲಿ, ಆನೆ, ಕತ್ತೆ, ಬೆಕ್ಕು ಇವುಗಳನ್ನು ಪ್ರತಿಮೆಗಳಾಗಿ ಹೆಚ್ಚು ಬಳಸಿದ್ದರೆ ಒಂಟೆ, ಕರಡಿ, ಹೋತ, ಕಸ್ತೂರಿ ಮೃಗ, ಇಲಿಗಳನ್ನು ವಿರಳವಾಗಿ ಬಳಸಿರುವುದನ್ನು ಕಾಣುತ್ತೇವೆ. ಕಾಡು ಪ್ರಾಣಿಗಳ ಬಳಕೆಗಿಂತ ಸಾಕು ಪ್ರಾಣಿ ಅಥವಾ ತಮ್ಮ ಪರಿಸರದ ನಡುವಿನಲ್ಲೇ ಇದ್ದ ಪ್ರಾಣಿಗಳನ್ನು ಹೆಚ್ಚು ಬಳಸಿದ್ದಾರೆ. ಅಕ್ಕಮಹಾದೇವಿಯ ವಚನಗಳು ಅತ್ಯಂತ ಮೌಲ್ಯಯುತವಾದವುಗಳಾಗಿದ್ದು, ಮೌಲ್ಯವನ್ನು ಹೆಚ್ಚಿಸುವಲ್ಲಿ ಪ್ರಾಣಿ ಪ್ರತಿಮೆಗಳು ಸಹಾಯಕವಾಗಿವೆ. ಅಕ್ಕಮ್ಮ ವ್ರತಭ್ರಷ್ಟರನ್ನು ಇಲಿ, ಬೆಕ್ಕು, ನಾಯಿ, ಕತ್ತೆಯ ಸ್ವಭಾವಗಳನ್ನು ಪ್ರತಿಮೆ ರೂಪದಲ್ಲಿ ಬಳಸಿದ್ದಾಳೆ. ಆಕೆ ಕತ್ತೆಯನ್ನು ಒಮ್ಮೆ ಶರಣ ತತ್ವ ಅರಿಯದ ಅಜ್ಞಾನಿಗಳನ್ನು ಸೂಚಿಸಲು ಬಳಸಿದರೆ ಮತ್ತೊಮ್ಮೆ ಡಾಂಭಿಕ ಭಕ್ತರನ್ನು ಸೂಚಿಸಲು ಬಳಸಿದ್ದಾಳೆ. ಅಮುಗೆರಾಯಮ್ಮಳಂತೂ ತನ್ನ ನಿಷ್ಠೂರ ನುಡಿ ಬಳಸಿಯೇ ಪ್ರಾಣಿಗಳನ್ನು ಪ್ರತಿಮೆಗಳನ್ನಾಗಿ ಬಳಸಿಕೊಂಡಿದ್ದಾಳೆ. ತನ್ನ ವ್ರತಾಚಾರದ ಮಹತ್ವವನ್ನು ಜನತೆಯಲ್ಲಿ ಮುಟ್ಟಿಸಲು ಈಕೆ ಬಳಸಿರುವ ಪ್ರಾಣಿಪ್ರತಿಮೆಗಳು ಅರ್ಥಪೂರ್ಣವಾಗಿ ಮೂಡಿಬಂದಿವೆ. ಅಮುಗೆ ರಾಯಮ್ಮ ವೇಷಧಾರಿ ವಿರಕ್ತರನ್ನು ಸನ್ಮಾರ್ಗದಲ್ಲಿ ನಡೆಸುವಂತೆ ಮಾಡಲು ಬಳಸಿರುವ ಪ್ರಾಣಿ ಪ್ರತಿಮೆಗಳು ವಿಭಿನ್ನವಾಗಿ ಹಾಗೂ ವಿಶಿಷ್ಟವಾಗಿವೆ. ಹಡಪದ ಲಿಂಗಮ್ಮನ ಬೋಧೆಯ ವಚನಗಳು ವೈಶಿಷ್ಟ್ಯವಾಗಿ ಕಾಣಲು ಪ್ರಾಣಿಪ್ರತಿಮೆಗಳು ಸಹ ಕಾರಣವಾಗಿವೆ. ಹಾಗೆಯೇ ಗಂಗಾಂಬಿಕೆ, ನೀಲಾಂಬಿಕೆ, ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಮುಂತಾದವರೂ ಕೂಡ ತಮ್ಮ ವಚನಗಳಲ್ಲಿ ಪ್ರಾಣಿಪ್ರತಿಮೆಗಳನ್ನು ಬಳಸಿ ವಚನಸಾಹಿತ್ಯದ ಅರ್ಥವಂತಿಕೆಯನ್ನು ಹೆಚ್ಚಿಸಿದ್ದಾರೆ. ಈ ಪ್ರಾಣಿಪ್ರತಿಮೆಗಳ ಕಾರಣದಿಂದ ಶಿವಶರಣೆಯರ ವಚನಗಳಲ್ಲಿನ ಸೌಂದರ್ಯ ಹಾಗೂ ಮೌಲ್ಯಗಳು ವಿಜೃಂಬಿಸಿವೆ.

**ಕೊನೆಟಿಪ್ಪಣಿ**

1. ಶಿವಶರಣೆಯರ ವಚನ ಸಂಪುಟ. ಪು ಥಟತ಼ು, ರಾಯಮ್ಮನ ಬಗೆಗಿನ ಪರಿಚಯದಲ್ಲಿ ತಿಳಿಸಲಾಗಿದೆ
2. ಶಿವಶರಣೆಯರ ವಚನ ಸಂಪುಟ. ಪು ಟಥಥಝು, ಹಡಪದ ಲಿಂಗಮ್ಮನ ಬಗೆಗಿನ ಪರಿಚಯದಲ್ಲಿ ತಿಳಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**

1. ವರ್ಣನಾತ್ಮಕ ವಚನ ಪದಕೋಶ– ಡಾ. ಸಂಗಮೇಶ ಸವದತ್ತಿ ಮಠ ರೂಪದರ್ಶಿ ಪ್ರಕಾಶನ, ಧಾರವಾಡ. ಪರಿಷ್ಕೃತ ಮತ್ತು ವಿಸ್ತೃತ ದ್ವಿತೀಯ ಆವೃತ್ತಿ 2011
2. ಶಿವಶರಣೆಯರ ವಚನ ಸಂಪುಟ– ಸಂ. ಡಾ ವೀರಣ್ಣ ರಾಜೂರ. ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು –2021.
3. ಶಿವಶರಣೆಯರ ಸಾಹಿತ್ಯ ಚರಿತ್ರೆ, ಡಾ ವಿಜಯಶ್ರೀ ಸಬರದ, ಕ್ರಿಯಾ ಮಾಧ್ಯಮ ಪ್ರೈ.ಲಿ. ಬೆಂಗಳೂರು. –2022